ಖಾಸಗಿ ನಿರ್ಣಯಂಗಳು

ವಿಷಯ :—ಬೆಂಗಳೂರಿನಲ್ಲಿರುವ ಎಲ್ಲಾ ಕೊಳಚೆ ಪ್ರದೇಶಗಳಲ್ಲಿ ಹಲವಾರು ವರ್ಷಗಳಿಂದ ವಾಸಿಸುತ್ತಿರುವ ನಿವಾಸಿಗಳಿಗೆ ಅತ್ಯಗತ್ಯವಾದ ಪೌರ ಸೌಲಭ್ಯಗಳನ್ನು ಒದಗಿಸಬೇಕೆಂಬುವ ಬಗ್ಗೆ.

ಶ್ರೀ ಪಿ. ರಾಮದೇವ್.—ಸನ್ಮಾನ್ಯ ಅಧ್ಯಕ್ಷರೇ ೮–೮–೭೮ ರಲ್ಲಿ ಮುಂಡಿಸತಕ್ಕಂತಹ ನಿರ್ಣಯ, ಸುಮಾರು ಎರಡೂವರೆ ವರ್ಷಗಳ ನಂತರ ಇವತ್ತು ಇದನ್ನು ಕೊನೆಗಾಣಿಸುವಂತ ಒಂದು ಅವಕಾಶ ಇದಕ್ಕೆ ಸಿಕ್ಕಿದೆ. ಈ ನಿರ್ಣಯವಾದರೂ ಬಹಳ ಸರಳವಾಗಿರತಕ್ಕಂತಹದ್ದು. ತುಂಬಾ ಸರಳವಾಗಿರತಕ್ಕ ನಿರ್ಣಯ. ಬೆಂಗಳೂರು ನಗರದಲ್ಲಿರತಕ್ಕ ಕೊಳಚೆ ಪ್ರದೇಶಗಳಲ್ಲಿ ವಾಸಮಾಡತಕ್ಕ ಬಡ ಜನತೆಗೆ ಪೌರ ಸೌಲಭ್ಯಗಳನ್ನು ಒದಗಿಸಿ ಕೊಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸುವುದೇ ಈ ನಿರ್ಣಯದ ಉದ್ದೇಶ. ಈ ನಿರ್ಣಯವನ್ನು ಸರ್ಕಾರ ಒಪ್ಪುತ್ತದೆಂದು ನನಗನಿಸುತ್ತದೆ. ಬಡವರಿಗೆ ಸೌಲಭ್ಯಗಳನ್ನು ಕೊಡತಕ್ಕದ್ದರಲ್ಲಿ ಆದರಲ್ಲಿಯೂ ಪೌರ ಸೌಲಭ್ಯಗಳನ್ನು ಕೊಡತಕ್ಕದ್ದರಲ್ಲಿ ಸರ್ಕಾರ ಒಪ್ಪುತ್ತದೆಂದು ನಾನು ಅಂದುಕೊಂಡಿದ್ದೇನೆ. ೮–೮–೭೮ರಲ್ಲಿ ಮುಂಡಿಸಿರತಕ್ಕ ನಿರ್ಣಯ ಇದು. ಇವತ್ತು ೧೯೮೧ನೇ ಇಸವಿಯಲ್ಲಿದ್ದೇವೆ. ಈ ನಿರ್ಣಯವನ್ನು ಸುಮಾರು ಎರಡೂವರೆ ವರ್ಷಗಳ ಕಾಲದಲ್ಲಿ ತಂದಿದ್ದು. ಬೆಂಗಳೂರು ನಗರದ ಹತ್ತಾರು ಕೊಳಚೆ ಪ್ರದೇಶಗಳಿಗೆ ಹಲವಾರು ಸೌಲಭ್ಯಗಳನ್ನು ಕೊಟ್ಟಿದ್ದಾರೆ. ನಾನು ಅದರಲ್ಲಿ ನಿರ್ವಿವಾದ ಅಂದುಕೊಂಡಿಲ್ಲ. ಅವರು ಏನು ಸೌಲಭ್ಯ ಕೇಳುತ್ತಾರೆ. ಕುಡಿಯುವ ನೀರು, ವಿದ್ಯುದ್ದೀಪ ಮತ್ತು ಒಳ್ಳೆಯ ಕಕ್ಕಸು ಕಟ್ಟಿಸುವುದು ಮತ್ತು ಕಮ್ಯೂನಿಟಿ ಬಾತ್ ರೂಮ್ ಕಟ್ಟಿಸತಕ್ಕ ಇಂತಹ ಕೆಲವಾರು ಮೂಲಭೂತ ಒಂದು ಪ್ರಯತ್ನ ನಡೆದಿದೆ. ಇದರ ಬಗ್ಗೆ ಸರ್ಕಾರವನ್ನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಕ್ಷೇತ್ರದ ಅನೇಕ ಕೊಳಚೆ ಪ್ರದೇಶಗಳಲ್ಲಿ ಕೆಲವು ಪ್ರದೇಶದ ಅಭಿವೃದ್ಧಿಯನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ಬೆಂಗಳೂರು ನಗರ ಕಾರ್ಪೊರೇಷನ್‌ರವರು ಮಾಡಿದ್ದಾರೆ, ರಾಜ್ಯ ಕೊಳಚೆ ನಿರ್ಮೂಲನ ಮಂಡಲಿಯವರು ಸ್ವಲ್ಪಮಟ್ಟಿಗೆ ಕೆಲಸ ಮಾಡಿದ್ದಾರೆ. ಬೆಂಗಳೂರು ನಗರ ಪ್ರಾಧಿಕಾರದವರು ಸ್ವಲ್ಪಮಟ್ಟಿಗೆ ಕೆಲಸ ಮಾಡಿದ್ದಾರೆ. ಎರಡು ವರ್ಷಗಳಲ್ಲಿ ನಾವು ಯಾವ ಮಟ್ಟದಲ್ಲಿ ನಿರೀಕ್ಷೆ ಮಾಡಿದ್ದೆವೊ ಆ ಮಟ್ಟದಲ್ಲಿ ಆಗಿಲ್ಲವೆಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಬೆಂಗಳೂರು ನಗರದಲ್ಲಿ ೫ ಲಕ್ಷ ಜನ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದಾರೆ. ಬೆಂಗಳೂರು ನಗರದ ಜನಸಂಖ್ಯೆ ೨೬ ಲಕ್ಷ. ಅಂದರೆ ೫ ಲಕ್ಷ ಕೊಳಚೆ ಪ್ರದೇಶದಲ್ಲಿ ವಾಸ ಮಾಡುತ್ತಿರುವುದರಿಂದ ೫ರಲ್ಲಿ ಒಬ್ಬರು ಕೊಳಚೆ ಪ್ರದೇಶದಲ್ಲಿ ವಾಸಮಾಡುತ್ತಿದ್ದಾರೆ. ಇದನ್ನು ಕೇಂದ್ರ ಸರ್ಕಾರದ ಪ್ಲಾನಿಂಗ್ ಕಮೀಷನ್‌ರವರು ಕೂಡ ಹೇಳಿದ್ದಾರೆ. ಭಾರತದೇಶದಲ್ಲಿ ೫ ಜನರಲ್ಲಿ ಒಬ್ಬರು ಕೊಳಚೆ ಪ್ರದೇಶದಲ್ಲಿ ವಾಸಮಾಡತಕ್ಕವರು ಎಲ್ಲಾ ನಗರಗಳಲ್ಲೂ ಇದ್ದಾರೆ. ಅವರು ಒಪ್ಪಿಕೊಂಡು ಕೊಳಚೆ ಪ್ರದೇಶಗಳನ್ನು ಏನು ಮಾಡುವುದಕ್ಕಾಗುವುದಿಲ್ಲ ಅವರಿಗೆ ಸೌಲಭ್ಯ ಕೊಡತಕ್ಕ ಯೋಜನೆಯನ್ನು ಮುಂದಿನ ಪ್ಲಾನ್‌ನಲ್ಲಿ ಮಾಡಬೇಕು. ಕನಿಷ್ಟ ಪಕ್ಷ ಪೌರ ಸೌಲಭ್ಯಗಳನ್ನಾದರೂ ಮಾಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಈ ನಿರ್ಣಯ ಬಂದ ಮೇಲೆ ನನಗೆ ತಿಳಿದಮಟ್ಟಿಗೆ ಸುಮಾರು ೨೫ಕ್ಕೆ ಕೊಳಚೆ ಪ್ರದೇಶಗಳು ಇದ್ದವು. ಈಗ ೪೩ಕ್ಕೆ ಕೊಳಚೆ ಪ್ರದೇಶಗಳೆಂದು ಗೊತ್ತಾಗಿದೆ.

ಶ್ರೀಮತಿ ಎಸ್. ಪ್ರಮಿಳ.—೬೦೦ ಕೊಳಚೆ ಪ್ರದೇಶಗಳು ಇವೆ.

ಶ್ರೀ ಪಿ. ರಾಮದೇವ್.—ಶ್ರೀಮತಿ ಪ್ರಮಿಳಾರವರು ೬೦೦ ಎಂದು ಹೇಳುತ್ತಾರೆ ಅವು ಲೆಕ್ಕಕ್ಕೆ ಸಿಕ್ಕುವುದಿಲ್ಲ. ಕೊಳಚೆ ಪ್ರದೇಶಗಳು ಲೆಕ್ಕಕ್ಕೆ ಸಿಕ್ಕುವುದಿಲ್ಲ. ಈ ನಿರ್ಣಯ ಬಂದಮೇಲೂ ಈ ರಾಜ್ಯದ ಉನ್ನತ ಸದನದಲ್ಲಿ ಚರ್ಚೆಯಾಗಿರಬೇಕಾದರೆ ಆಷ್ಟೊಂದು ಹೆಚ್ಚಿನ ಕೊಳಚೆ ಪ್ರದೇಶಗಳು ನಿರ್ಮಾಣವಾಗಿವೆ, ತಾವು ಯೋಚನೆ ಮಾಡಬೇಕು, ಎಷ್ಟರಮಟ್ಟಿಗೆ ಇದನ್ನು ಸರ್ಕಾರ ತಡೆಗಟ್ಟುವುದಕ್ಕೆ ಪ್ರಯತ್ನ ಪಟ್ಟಿದೆ, ಅನ್ನುವುದನ್ನು ಸಹ ಯೋಚನೆ ಮಾಡಬೇಕು. ಸ್ವಾಮಿ ಕೊಳಚೆ ಪ್ರದೇಶ ಇದು ಕೇವಲ ಬಡವರೇ ಹಾಕುತ್ತಿಲ್ಲ, ಅದರ ನಿರ್ಮಾಣ ಬಡವರೇ ಮಾಡುತ್ತಿಲ್ಲ. ಇದರಲ್ಲಿ ರಾಜಕಾರಣ ಬೆರೆತಿರುವುದರಿಂದ ಅದರಲ್ಲಿ ರೂಲಿಂಗ್ ಪಾರ್ಟಿಯವರೇ ಇರುತ್ತಾರೆ. ಯಾರು ಅಧಿಕಾರದಲ್ಲಿರುತ್ತಾರೋ ಅವರು ಇರುತ್ತಾರೆ. ಪಕ್ಷದ ಜನರೇ ಜಾಸ್ತಿ ಕೊಳಚೆ ಪ್ರದೇಶಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ಇದು ಹಿಂದಿನಿಂದಲೂ ಬಂದಿರುತ್ತದೆ. ಮಾನ್ಯ ಧರ್ಮಸಿಂಗ್‌ರವರು ಬಂದಮೇಲೆ ಆಗಿಲ್ಲ, ಹಿಂದಿನಿಂದಲೂ ದೇವರಾಜ ನಗರ, ಸಂಜಯ್ ನಗರ ಈ ರೀತಿ ಹಾಕಿಕೊಂಡು ಬರುತ್ತಿದ್ದಾರೆ. ಅದರ ಬಗ್ಗೆ ಒಂದು

ರಿಪೋರ್ಟ್ ಬಂದಿದೆ. ಕೊಳಚೆ ಪ್ರದೇಶ ಅಭಿವೃದ್ಧಿಯ ಬಗ್ಗೆ ಮಾನ್ಯ ಚಂದ್ರಶೇಖರ್ ಹೇಳಿದ್ದಾರೆ. ಸರ್ಕಾರಕ್ಕೆ ಮತ್ತು ಕೊಳಚೆ ಪ್ರದೇಶ ನಿರ್ಮೂಲನ ಮಂಡಳಿ ಅಧಿಕಾರಿಗಳಿಗೆ, ಕಾರ್ಪೊರೇಷನ್ ಅಧಿಕಾರಿಗಳಿಗೆ ಬೆಂಗಳೂರು ನಗರ ಪ್ರಾಧಿಕಾರದ ಅಧಿಕಾರಿಗಳಿಗೆ ತೀವ್ರವಾಗಿ ಕೊಳಚೆ ಪ್ರದೇಶಗಳನ್ನು ತಡೆಯಬೇಕು ಅನ್ನತಕ್ಕ ಭಾವನೆ ಅವರಲ್ಲಿ ಬಂದಿಲ್ಲ. ಕಾರ್ಪೊರೇಷನ್, ಪ್ರಾಧಿಕಾರ ಮತ್ತು ಕೊಳಚೆ ಪ್ರದೇಶ ನಿರ್ಮೂಲನ ಮಂಡಳಿ ಪ್ರತಿಯೊಬ್ಬರ ಆಕ್ಟ್‌ನಲ್ಲೂ ಇದೆ. ಇವರ ಪರ್ಮಿಷನ್ ಇಲ್ಲದೆ ಒಂದು ಇಟ್ಟಿಗೆಯನ್ನು ಸಹ ಇಡುವ ಹಾಗೆ ಇಲ್ಲ. ಹೀಗಿರುವಾಗ ಸುಮಾರು ಮೂರನೆ ಒಂದು ಭಾಗ ನಗರದಲ್ಲಿ ಕಟ್ಟಿರುವ ಕಟ್ಟಡಗಳಲ್ಲಿ ಎಲ್ಲಾ ಅನಧಿಕೃತ ಕಟ್ಟಡಗಳು ನಿರ್ಮಾಣವಾಗಿವೆ. ಅನಧಿಕೃತ ಕಟ್ಟಡಗಳು ಗುಡಿಸಲುಗಳು ನಿರ್ಮಾಣವಾಗಿವೆ, ಅದು ಹೇಗೆ ಆಯಿತು ? ಅಷ್ಟೊಂದು ಲಾರ್ಜ್ ಸ್ಕೇಲ್‌ನಲ್ಲಿ ಅನಧಿಕೃತ ಕಟ್ಟಡಗಳು ಆಗಿವೆ ಎಂದರೆ ಇದಕ್ಕೆ ಯಾರ ಪ್ರೋತ್ಸಾಹ ಇದೆ. ವಿಮರ್ಶೆ ಮಾಡಿ ನೋಡಿದರೆ, ಇದಕ್ಕೆ ಕಾರಣ ಒಂದುಕಡೆ ರಾಜಕೀಯ ಕಾರಣ ಇದೆ. ಇನ್ನೊಂದು ಕಡೆ ಅಧಿಕಾರಿಗಳು ಕಾರಣ. ಇವರೆಲ್ಲ ಸೇರಿ ನಿರ್ಮಾಣ ಮಾಡುತ್ತಿದ್ದಾರೆ. ಈ ರೀತಿ ನಿರ್ಮಾಣ ಮಾಡುವುದರಿಂದ ಇದನ್ನು ತಡೆಯತಕ್ಕಂತಹ ಶಕ್ತಿ ಯಾವ ಸಂಘಸಂಸ್ಥೆಗಳಿಂದಲೂ ಸಾಧ್ಯವಿಲ್ಲ. ಇತ್ತೀಚೆಗೆ ಆರ್ಡಿನೆನ್ಸ್ ಇಷ್ಯೂ ಮಾಡಿ ಗುಡಿಸಲು ಬರತಕ್ಕ ಪ್ರದೇಶಗಳಲ್ಲಿ ಕಿತ್ತುಹಾಕುವ ಪ್ರಯತ್ನ ನಡೆಯಿತು. ಜಯನಗರದಲ್ಲಿ ಒಂದು ಕಾಲೋನಿ ಶುರುವಾದಾಗ ಪೋಲೀಸನವರಿಂದ ಹೊಡಿಸಿ ಕೀಳಿಸಿದಾಗ ಪುನಃ ಗುಡಿಸಲುಗಳು ನಿರ್ಮಾಣವಾಯಿತು. ಈ ರೀತಿ ಇದ್ದರೂ ಬೆಳೆಯಬೇಕಾದರೆ ನನಗನಿಸುತ್ತದೆ ಪಾಸಿಟೀವ್ ಆ್ಯಂಗಲ್‌ನಲ್ಲಿ ಮಾಡಬೇಕು. ಇದಕ್ಕೆ ಕಾನೂನು ಇರಬೇಕು, ಕಾನೂನು ಇದ್ದರೂ ಮಾನವರ ಮೇಲೆ ಬಲಾವಣೆ ಮಾಡುವಾಗ ಮಾನವೀಯ ಸಮಸ್ಯೆಗಳು ಬಂದಾಗ ಕಾನೂನು ಬಲಾವಣೆ ಮಾಡುವುದು ಕಷ್ಟವಾಗುತ್ತದೆ. ಆದ್ದರಿಂದ ಪಾಸಿಟೀವ್ ಆ್ಯಂಗಲ್‌ನಲ್ಲಿ ಮಾಡಬೇಕು. ನಗರಕ್ಕೆ ಜನ ವಲಸೆ ಬರುತ್ತಾರೆ. ತಮ್ಮ ಜೀವನಕ್ಕೋಸ್ಕರ ಇಲ್ಲಿಗೆ ಬರುತ್ತಾರೆ. ಕೆಲಸಕ್ಕೆ ಬರುತ್ತಾರೆ, ನಾವು ಈ ಜನಗಳಿಗೆ ಬೇಕಾಗಿರತಕ್ಕ ವಾಸಕ್ಕೆ ಯೋಗ್ಯವಾದ ಮನೆಗಳನ್ನು ಕಟ್ಟುವ ಪ್ರಯತ್ನ ಮಾಡಬೇಕು. ಇತ್ತೀಚೆಗೆ ಮುಖ್ಯ ಮಂತ್ರಿಗಳು ಹಲವಾರು ನಗರಗಳಿಗೆ ಕರೆದುಕೊಂಡು ಹೋಗಿದ್ದರು. ಇವತ್ತು ಮದ್ರಾಸ್ ನಗರದ ಸ್ಲಮ್ ಬೋರ್ಡ್ ಬಹಳ ಚೆನ್ನಾಗಿ ಕೆಲಸ ಮಾಡಿದೆ. ವಾಸಕ್ಕೆ ಯೋಗ್ಯವಾದ ಮನೆಗಳನ್ನು ಕಟ್ಟುವ ಒಂದು ಪ್ರಯತ್ನವನ್ನು ಏನು ಮಾಡಿದ್ದಾರೆ ಆ ರೀತಿ ಇನ್ನಾವ ನಗರದಲ್ಲಿಯೂ ಮಾಡಿಲ್ಲ. ಸಹಸ್ರಾರು ಫ್ಲಾಟ್‌ಗಳನ್ನು ಕೊಟ್ಟಿದ್ದಾರೆ. ವ್ಯವಸ್ಥಿತ ರೀತಿಯಲ್ಲಿ ಬಿಲ್ಡಿಂಗನ್ನು ಕಟ್ಟಿ, ಸೈಟುಗಳನ್ನು ಕೊಟ್ಟಿದ್ದಾರೆ. ತಮ್ಮ ಹಣ ಹಾಕುವುದರ ಜೊತೆಗೆ ಕೇಂದ್ರ ಸರ್ಕಾರದ ಹಣವನ್ನು ತೆಗೆದುಕೊಂಡು, ಪ್ರಪಂಚದ ಬ್ಯಾಂಕಿನಿಂದಲೂ ಸಹ ಕೋಟ್ಯಾಂತರ ರೂಪಾಯಿಗಳನ್ನು ತೆಗೆದುಕೊಂಡು ಬಂದು ಮಹಡಿ ಮನೆಗಳನ್ನು ಕಟ್ಟಿಸಿದ್ದಾರೆ, ಅಷ್ಟೇ ಅಲ್ಲದೆ ಡೆಡ್ ಲೈನ್ ೧೯೭೬ರಲ್ಲಿ ಸ್ಲಮ್‌ಗಳಲ್ಲಿ ರಿಜಿಸ್ಟರ್ ಮಾಡಿರುತ್ತಾರೆ. ಸೌಲಭ್ಯಗಳನ್ನು ಒದಗಿಸುವುದಕ್ಕೋಸ್ಕರವಾಗಿಯೇ ೭೬ನೇ ಇಸವಿ ಒಳಗಡೆ ಇದ್ದವರ ಒಂದು ಲಿಸ್ಟ್ ತಯಾರು ಮಾಡಿದ್ದಾರೆ. ೭೬ರ ಈಚೆಗೆ ಇದ್ದವರ ಒಂದು ಲಿಸ್ಟ್ ಮಾಡಿದ್ದಾರೆ. ೭೬ರ ಒಳಗೆ ಇದ್ದವರಿಗೆ ಸೌಲಭ್ಯಗಳನ್ನು ಕೊಡಬೇಕೆನ್ನುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿ ಒಂದು ಕಡೆ ಸೇರಿಸಿ ಮೂಲಭೂತ ಸೌಲಭ್ಯಗಳನ್ನು ಕೊಡುತ್ತಿದ್ದಾರೆ.

೧೨–೩೦ ಪಿ.ಎಂ.

ಅಧ್ಯಕ್ಷರೆ, ಮದ್ರಾಸ್‌ನಲ್ಲಿ ಮೂಲಭೂತವಾದ ಸಮಸ್ಯೆಗಳ ಬಗ್ಗೆ ಏನೇನು ಅನುಕೂಲ ಮಾಡಿಕೊಡಬೇಕು ಅದನ್ನೆಲ್ಲಾ ಅನುಕೂಲ ಮಾಡಿಕೊಡುತ್ತಿದ್ದಾರೆ. ಪಾಸಿಟೀವ್ ಆಗಿ ಮನೆಗಳನ್ನು ಕೊಡುತ್ತಿದ್ದಾರೆ, ಸೈಟುಗಳನ್ನು ಕೊಡುತ್ತಿದ್ದಾರೆ. ಮನೆಗಳನ್ನು ಕಟ್ಟಲಿಕ್ಕೆ ಹಣವನ್ನು ಕೊಡುತ್ತಿದ್ದಾರೆ. ಅಲ್ಲಿರತಕ್ಕ ಸಮಸ್ಯೆಗಳನ್ನು ಪರಿಹಾರ ಮಾಡಲಿಕ್ಕೆ ನಗರ ಸಭೆಯಿಂದ ಪ್ರಯತ್ನಪಟ್ಟಿದ್ದಾರೆ. ಇವೊತ್ತು ನಮ್ಮಲ್ಲಿ ಏನಾಗಿದೆ ಅದನ್ನು ತಾವು ನೋಡಬೇಕು. ಕಲ್ಕತ್ತ, ಬಾಂಬೆಯಲ್ಲಿ, ಮದ್ರಾಸ್‌ನಲ್ಲಿ ನೋಡಿಕೊಂಡು ಬಂದಿದ್ದೇವೆ, ಮದ್ರಾಸ್‌ನಲ್ಲಿ ಮಾಡಿರತಕ್ಕ ಕೆಲಸ ಬಹಳ ಗಂಭೀರವಾದುವು. ಅಲ್ಲಿರತಕ್ಕ ಸ್ಲಮ್‌ಬೋರ್ಡ್ ಅಷ್ಟೇ ಆ್ಯಕ್ಟೀವ್ ಆಗಿ ಕ್ರಿಯಾಶೀಲತೆಯಿಂದ ಕೆಲಸ ಮಾಡುವುದನ್ನು ನೋಡಿದ್ದೇವೆ. ನಮ್ಮಲ್ಲಿ ೧೯೭೩ರಲ್ಲೇ ಸ್ಲಮ್‌ಬೋರ್ಡ್ ಮಾಡಿದೆವು. ಕೊಳಚೆ ಪ್ರದೇಶಗಳ ಸಮಸ್ಯೆಗಳನ್ನು ಪರಿಹಾರ ಮಾಡಬೇಕಾದರೆ ಪ್ರತ್ಯೇಕವಾದ ಒಂದು ಮಂಡಳಿ ಇರಬೇಕೆಂದು ಹಲವಾರು ವರ್ಷಗಳಿಂದ ಒತ್ತಡವನ್ನು ಮಾಡಿದ್ದರಿಂದ ಈ ಸಭೆಯಲ್ಲಿ ಒಂದು ತೀರ್ಮಾನ ಮಾಡಿ ಒಂದು ಸ್ಲಮ್‌ಬೋರ್ಡ್ ಮಾಡಿದರು. ನನಗೆ ತಿಳಿದಮಟ್ಟಿಗೆ ೧೯೭೩ ರಿಂದ ೧೯೮೧ರ ವರೆಗೆ ಕೊಳಚೆ ಮಂಡಳಿ ಯಾವುದೇ ಕೊಳಚೆ ಪ್ರದೇಶವನ್ನು

ನಿರ್ಮೂಲನ ಮಾಡಿಲ್ಲ. ಇದು ಏನಾಗಿದೆ ಎಂದರೆ ಎಂಟು ವರ್ಷಕ್ಕೆ ನನ್ನ ಮಗ ದಂಟು ಎಂದ ಹಾಗೆ ಆಗಿದೆ. ಅಲ್ಲಿ ಒಬ್ಬ ಚೇರ್‌ಮನ್ ಹಾಕಿದ್ದಾರೆ, ಮೆಂಬರುಗಳನ್ನು ಕೊಟ್ಟಿದ್ದಾರೆ ಸರ್ಕಾರದ ಮೆಂಬರು ಗಳಿದ್ದಾರೆ. ಲೆಂಟ್ ಅಫಿಷಿಯಲ್ಸ್ ಕೊಟ್ಟಿದ್ದಾರೆ. ಎಂಟು ವರ್ಷದಿಂದ ಇವರು ಮಾಡಿದ್ದು ಏನು ಎಂದು ಕೇಳಬೇಕಾಗಿದೆ. ಎಂಟು ವರ್ಷಕ್ಕೆ ನನ್ನ ಮಗ ದಂಟು ಎಂದ ಹಾಗೆ ಆಗಿದೆ. ಎಂಟು ವರ್ಷದಿಂದ ಕೆಲಸ ಏನೂ ಆಗಿಲ್ಲ. ೧೯೭೩ ರಿಂದ ೧೯೮೧ರ ವರೆಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಪ್ರತ್ಯೇಕವಾದ ಮಂಡಳಿಗಳನ್ನು ಮಾಡಿದ್ದೀರಿ. ಜಲಮಂಡಳಿ ಮಾಡಿದ್ದೀರಿ, ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಮಾಡಿದ್ದೀರಿ, ಹೀಗೆ ಹತ್ತಾರು ಮಂಡಳಿಗಳನ್ನು ಮಾಡಿದ್ದೀರಿ. ಮಂಡಳಿಗಳು ಹೆಚ್ಚು ಗಮನ ವನ್ನು ಕೊಟ್ಟು ಸಮಸ್ಯೆಗಳನ್ನು ಪರಿಹಾರ ಮಾಡಲಿ ಎಂಬ ಉದ್ದೇಶದಿಂದ ಮಾಡಿದ್ದೀರಿ. ಆದರೆ ೧೯೭೩ ರಿಂದ ೧೯೮೧ರ ವರೆಗೆ ಟಿ.ಎ. ಮತ್ತು ಡಿ.ಎ. ತೆಗೆದುಕೊಂಡು ಹಣ ಖರ್ಚು ಮಾಡುವುದು ಆಗಿದೆಯೇ ವಿನಹ ಕೆಲಸ ಏನೂ ಆಗಿಲ್ಲ. ಚೇರ್‌ಮನ್‌ಗಳು ಬಂದರೂ ಹೋದರು. ಇನ್ನು ಆಲ್ಲಿರತಕ್ಕ ಆಫಿಷಿಯಲ್ಸ್ ಏನೂ ಕೆಲಸ ಮಾಡಿಲ್ಲ. ಸ್ಲಮ್ ಇಂಪ್ರೂವ್‌ಮೆಂಟ್ ಬಗ್ಗೆ ಕಳೆದ ವರ್ಷದವರೆಗೆ ಖರ್ಚು ಮಾಡಿರತಕ್ಕ ಹಣ ಆರೂವರೆ ಲಕ್ಷ ರೂಪಾಯಿ ಆಗಿದೆ. ಎಂಟು ವರ್ಷದಲ್ಲಿ ಅಂದರೆ ೧೯೮೦ರ ವರೆಗೆ ಆರೂವರೆ ಲಕ್ಷ ರೂಪಾಯಿ ಖರ್ಚು ಮಾಡಿ ಆ ಮಂಡಳಿಯಲ್ಲಿ ಎಷ್ಟು ಜನ ಕೆಲಸ ಮಾಡಿದ್ದಾರೆ ಅದನ್ನು ನೋಡಬೇಕಾಗುತ್ತದೆ. ಅಲ್ಲಿ ಅವರಿಗೆ ಒಂದು ಜೀಲ್, ಒಂದು ಎನ್‌ಥೂಸಿಯಾಸಮ್ ಇಲ್ಲ. ಆ ಜನರಿಗೆ ಬಡ ಜನರ ಸಮಸ್ಯೆಗಳನ್ನು ಪರಿಹಾರ ಮಾಡಬೇಕು, ಅವರಿಗೆ ಬೇಕಾಗಿರತಕ್ಕ ಪೌರಸೌಲಭ್ಯಗಳು ಏನಿವೆ, ನೀರು, ಲ್ಯಾವೇಟರಿ, ಲೈಟು, ಇವುಗಳನ್ನೆಲ್ಲಾ ಅವರಿಗೆ ಕೊಡಬೇಕು ಎನ್ನುವಂತಾದ್ದು ಅವರಲ್ಲಿ ಬರಲಿಲ್ಲ. ಸುಮ್ಮನೆ ಒಂದು ಪೊಲಿಟಿಕಲ್ ಅಪಾಯಿಂಟ್‌ಮೆಂಟ್ ಆಯಿತು. ಯಾರೋ ಕೆಲವರು ಚುನಾವಣೆಯಲ್ಲಿ ನಿಂತಿರುತ್ತಾರೆ, ಅವರಿಗೆ ಏನಾದರೂ ಒಂದು ಉಪಯೋಗ ಮಾಡಿ ಕೊಡಬೇಕಾಗಿರುತ್ತದೆ, ಅದು ನಡೆಯುತ್ತಾ ಇರುತ್ತದೆ. ಯಾರು ಗಲಾಟೆ ಮಾಡುತ್ತಾ ಇರುತ್ತಾರೆ ಅವರಿಗೆ ಒಂದು ಮೆಂಬರ್‌ಷಿಪ್, ಒಂದು ಚೇರ್‌ಮನ್‌ಷಿಪ್ ಕೊಡಲಿಕ್ಕೆ ಅನೇಕ ಮಂಡಳಿಗಳನ್ನು ಮಾಡಿಕೊಂಡು ಕೊಡುತ್ತಾ ಬಂದರು. ಪೊಲಿಟಿಕಲ್ ಸ್ಟೆಬಿಲಿಟಿ ಬರಬೇಕು ಅಂತ ಈ ರಾಜ್ಯದಲ್ಲಿ ಮಾಡಿದರು. ಆದರೆ, ಅದು ಈಗ ಮಾತ್ರ ಆಗುತ್ತಿಲ್ಲ ಬಹಳ ಸಂತೋಷ. ಆದರೆ ೮ ವರ್ಷಗಳ ಕಾಲದಲ್ಲಿ ಇವರು ಮಾಡಿರತಕ್ಕ ಕೆಲಸ ಏನು ? ಸ್ಲಮ್ ಇಂಪ್ರೂವ್‌ಮೆಂಟ್ ಬಗ್ಗೆ ಆರೂವರೆ ಲಕ್ಷ ರೂಪಾಯಿ ಖರ್ಚು ಮಾಡಿ ಏನು ಕೆಲಸ ಮಾಡಿದ್ದಾರೆ ಎನ್ನುವುದನ್ನು ತಾವೇ ಯೋಚನೆ ಮಾಡಬೇಕು. ಇಂತಹ ಮಂಡಳಿಗಳು ಇರಬೇಕೇ ಎಂದು ಕೇಳುತ್ತೇನೆ. ಇಂತಹ ಮಂಡಳಿಗಳಿಂದ ನಾಗರೀಕರಿಗೆ ಪ್ರಯೋಜನ ಇಲ್ಲ, ಸ್ಲಮ್ ಡ್ವೆಲರ್ಸ್‌ಗೆ ಪ್ರಯೋಜನ ಇಲ್ಲ. ಸರ್ಕಾರ ಏನು ಸಾಧನೆ ಮಾಡಬೇಕು ಎಂದು ಹೇಳಿದ್ದೀರಿ, ಅದರ ಬಗ್ಗೆ ಪ್ರಯೋಜನ ಆಗಿಲ್ಲ. ಆದುದ ರಿಂದ, ಇದನ್ನು ಏತಕ್ಕೆ ರದ್ದು ಮಾಡಬಾರದು ಎಂದು ಕೇಳುತ್ತೇನೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕು. ತಾವು ಬೇರೆ ಕಡೆ ನೋಡಿಕೊಂಡು ಬಂದಿದ್ದೀರಿ. ಇವರಿಗೆ sanitary conditions, improvement of living conditions and promotion of health ಎಲ್ಲಾ ಇರಬೇಕು ಎನ್ನುವ ಆಬ್ಜಕ್ಟ್ಸ್ ಹಾಕಿ ಕೊಟ್ಟಿದ್ದೀರಿ. ಅವರು ಒಂದು ಮಾಡಲಿಕ್ಕೆ ಸಾಧ್ಯ ವಾಗದ ಮೇಲೆ ಏನು ಪ್ರಯೋಜನ. ಯಾರಿಗೋ ಕೆಲವರಿಗೆ ಸಂಬಳ ಕೊಡುವುದಕ್ಕೆ, ಅವರಿಗೆ ಅಧಿಕಾರ ಇರಲಿ ಎಂದು ಕೊಡುವುದಕ್ಕೆ ಮಾಡಿದರೆ ಏನು ಪ್ರಯೋಜನ. ಅದರ ಜೊತೆಗೆ ತಾವು ಹಾಕಿರತಕ್ಕ ಅಧಿಕಾರಿಗಳು ಯಾರು ಎಂದು ನೋಡುವುದಾದರೆ, ತಾವು ಬಡವರ ಬಗ್ಗೆ ಮರುಕ ಇರತಕ್ಕವರನ್ನು ಹಾಕಬೇಕಾಗಿತ್ತು. ಅಂತಹವರನ್ನು ಹಾಕಿಲ್ಲ. ಬರೇ ಆಫೀಸಿನಲ್ಲಿ ಕುಳಿತುಕೊಂಡು ವರ್ಕ್ ಮಾಡಿದೆ ಕಾರಿನಲ್ಲಿ ಓಡಾಡಿಕೊಂಡು ಎಷ್ಟು ದುಡ್ಡು ಮಾಡಿಕೊಳ್ಳಬಹುದು ಎಂದು ಯೋಚನೆ ಮಾಡುವವರನ್ನು ಹಾಕಿದ್ದಾರೆ. ಇನ್ನು ಅವರ ಸ್ಟೇಟಸ್ ಹೇಳಬೇಕು ಎಂದರೆ ಅಲ್ಲಿ ಒಬ್ಬರು ಸೆಕ್ರೆಟರಿಯವರನ್ನು ಹಾಕಿ ದ್ದಾರೆ. ಆ ಸೆಕ್ರೆಟರಿಯವರಿಗೆ ಸರಿಯಾದ ಸ್ಟೇಟಸ್ ಇಲ್ಲ. ಮದ್ರಾಸ್ ಸ್ಲಮ್ ಬೋರ್ಡ್‌ನಲ್ಲಿರತಕ್ಕ ಸೆಕ್ರೆಟರಿ ಮತ್ತು ಇಂಜಿನಿಯರ್‌ಗಳು Slum Boards Secretary and Engineer are next to the Chief Secretary and Chief Engineer. ಅಂಥ ಗ್ರೇಡ್‌ನಲ್ಲಿರತಕ್ಕವ ರನ್ನು ಹಾಕಿದ್ದಾರೆ, ಅವರು ಯಾವುದೇ ಸಮಸ್ಯೆಯನ್ನು ನೇರವಾಗಿ ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗಿ ಆ ಕೆಲಸವನ್ನು ಮಾಡಿಕೊಂಡು ಬಂದು ಜಯಶೀಲರಾಗಿದ್ದಾರೆ. Next to Chief Secretary is the Secretary of the Slum Board ಚೀಫ್ ಇಂಜಿನಿಯರ್ ಒಬ್ಬರು Senior Most Engineer. They were able to solve the problem ; they were able to tackle the problem effectively and usefully. ಈಗ ನಮ್ಮಲ್ಲಿ

ಬಹಳ ಕೆಳಮಟ್ಟದವರನ್ನು ಹಾಕಿರುವುದರಿಂದ ಯಾವುದೇ ಮಂಡಳಿಯಿಂದಲೂ ಕೂಡ ನಮಗೆ ಏನೂ ಪ್ರಯೋಜನವಾಗಿಲ್ಲ. ಆದುದರಿಂದ ದಯವಿಟ್ಟು ಈ ಮಂಡಳಿಗಳನ್ನೂ ಕಿತ್ತೊಗೆದು ಈಗ ಮೆಟ್ರೊಪಾಲಿಟನ್ ಬೋರ್ಡ್ ಮಾಡಬೇಕೆಂದು ಏನು ಮಾಡಿದ್ದೀರಿ ಆದರಲ್ಲಿ ಇದನ್ನು ಸೇರಿಸಬೇಕು ಎಂದು ಒತ್ತಾಯ ಮಾಡುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ಏನು ಮಾಡಬೇಕು ಎಂದು ತಿಳಿಸಿದಿರಿ.

ಶ್ರೀ ಪಿ. ರಾಂದೇವ್.—ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ಸಪರೇಟ್ ಆಗಿ ಇರುವುದು ಬೇಡ. ಈಗ ಮೆಟ್ರೊಪಾಲಿಟನ್ ಬೋರ್ಡ್ ಎಂದು ಏನು ತಾವು ಮಾಡುತ್ತಿದ್ದೀರಿ, ಆದಕ್ಕೆ ಸ್ವಲ್ಪ ಎಕ್ಸಿಕ್ಯುಟೀವ್ ಪವರ್ ಕೊಟ್ಟು ಅದರಲ್ಲಿ ಇದನ್ನು ಸೇರಿಸಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಮಳ್ಳೂರು ಆನಂದರಾವ್ (ರಾಜಾಜಿನಗರ).—ಅಧ್ಯಕ್ಷರೆ, ಮಾನ್ಯ ಸದಸ್ಯರು ಗಂಭೀರವಾದ ಸಲಹೆ ಮಾಡುತ್ತಿದ್ದಾರೆ. ಸ್ಲಮ್‌ಬೋರ್ಡ್ ಸಪರೇಟ್ ಆಗಿ ಇಟ್ಟು ಆದಕ್ಕೆ ಒಂದು ವ್ಯಕ್ತಿತ್ವ ಕೊಟ್ಟು, ಕಾನ್‌ಸ್ಟಿಟ್ಯೂಟ್ ಮಾಡಿ, ಫಂಡ್ಸ್ ಕೊಟ್ಟು, ಕಛೇರಿ ಕೊಟ್ಟು, ಅಧಿಕಾರಿಗಳನ್ನು ಕೊಟ್ಟು ಅಷ್ಟರ ಮಟ್ಟಿಗೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ನಿಜ, ಆದರ ಬಗ್ಗೆ ಯಾರಿಗೂ ತೃಪ್ತಿ ಇಲ್ಲ. ಇವೊತ್ತು ಇಡೀ ಮಂಡಳಿಯನ್ನೇ ಕಿತ್ತೊಗೆದುಬಿಟ್ಟರೆ ಕಷ್ಟ. ಅಷ್ಟೆಲ್ಲಾ ವ್ಯವಸ್ಥೆ ಮಾಡಿಕೊಟ್ಟು, ಅದು ಯಾವ ಅಪೇಕ್ಷಿತ ಮಟ್ಟದಲ್ಲಿ ಪ್ರಗತಿ ದೊರಕಿಸಿಕೊಡಬೇಕಾಗಿತ್ತೋ ಅದನ್ನು ಮಾಡಿಲ್ಲ ಎಂದು ಹೇಳಿದ್ದಾರೆ. ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಆ ಮಂಡಳಿಯನ್ನೇ ರದ್ದು ಮಾಡಿ ಮೆಟ್ರೊಪಾಲಿಟನ್ ಬೋರ್ಡ್‌ನಲ್ಲಿ ಸೇರಿಸಬೇಕು ಎಂದರೆ, ಇನ್ನೂ ಮೆಟ್ರೊಪಾಲಿಟನ್ ಬೋರ್ಡ್ ವಿಚಾರ ಸರ್ಕಾರದ ನಿರೀಕ್ಷಣೆಯಲ್ಲಿರುವಂತಾದ್ದು. ಅದು ಯಾವಾಗ ಕಾರ್ಯಗತವಾಗುತ್ತದೆಯೋ ಗೊತ್ತಿಲ್ಲ. ಆದಕ್ಕೆ ಇದನ್ನು ಸೇರಿಸುವುದು ಸೂಕ್ತವಾದ ಸಲಹೆಯೇ ? ಮೆಟ್ರೊಪಾಲಿಟನ್ ಆದ ತಕ್ಷಣ ಆದಕ್ಕೆ ಇಡೀ ಬೆಂಗಳೂರು ನಗರದ ಸಮಸ್ಯೆ ಎಷ್ಟು ಇರುತ್ತದೆ, ಅಷ್ಟನ್ನು ನೋಡಿಕೊಳ್ಳುವ ಸಮಸ್ಯೆ ಇರುತ್ತದೆ. ಆದ್ದರಿಂದ, ತಮ್ಮ ಸಲಹೆ ಸೂಕ್ತವೆ ? ಅದಕ್ಕೆ ಬದಲು ಇರತಕ್ಕ ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ಇನಿದೆ ಇದು ಮತ್ತಷ್ಟು ಸಮರ್ಪಕವಾಗಿ ಕೆಲಸ ಮಾಡುವ ಹಾಗೆ ಏನೇನು ಮಾಡಬೇಕು ಅದಕ್ಕೆ ನಾವು ಸಹಕಾರ ಕೊಡೋಣ. ಇನ್ನು ಈ ಸಿಟಿ ಲೆಜಿಸ್ಲೇಟರ್ಸ್ ನಾವು ೧೨ ಜನ ಇದ್ದೇವೆ. ಆ ಬೋರ್ಡ್‌ನವರು ಎಂದೂ ನಮ್ಮನ್ನು ಮೀಟಿಂಗ್‌ಗೆ ಕರೆಯುವುದಿಲ್ಲ. ಕಾರ್ಪೊರೇಷನ್‌ನಲ್ಲಿ ಕರೆಯುತ್ತಾರೆ. ಸಿಟಿ ಲೆಜಿಸ್ಲೇಟರ್ಸ್ ಮೀಟಿಂಗ್‌ಗೆ ಕರೆಯದೇ ಇರತಕ್ಕ ಎರಡು ಮೂರು ಬೋರ್ಡ್‌ಗಳಿವೆ. ಒಂದು ಬಿ.ಡಿ.ಎ. ಅವರು ನಮ್ಮನ್ನು ಕರೆಯುವುದಿಲ್ಲ. ನಾವೇ ಅವರ ಹತ್ತಿರ ಹೋಗಬೇಕು. ಇನ್ನು ಹೌಸಿಂಗ್ ಬೋರ್ಡ್ ಅವರು ನಮ್ಮನ್ನು ಕರೆಯುವುದಿಲ್ಲ. ಇನ್ನು ವಿಲೆಕ್ಟ್ರಿಸಿಟಿ ಬೋರ್ಡ್, ವಾಟರ್ ಬೋರ್ಡ್‌ನವರು ಕರೆಯುತ್ತಾರೆ. ಸ್ಲಮ್ ಯಾವೊತ್ತು ಶಾಸಕರಿಗೆ ಹತ್ತಿರ ಸಂಬಂಧ ಇರುತ್ತದೆ. ಬೆಳಿಗ್ಗೆ ಮನೆಯ ಹತ್ತಿರ ಬರುವವರೆಲ್ಲಾ ಸ್ಲಮ್‌ನವರೆ, ಸ್ಲಮ್ ಬೋರ್ಡ್‌ಗೆ ಅಹವಾಲ್ ತೆಗೆದುಕೊಂಡು ನಾವೇ ಹೋಗಬೇಕು. ಇದರ ಬಗ್ಗೆ ಮಾನ್ಯ ರಾಂದೇವ್ ಅವರು ವಿಚಾರ ಮಾಡಬೇಕೆಂದು ಹೇಳುತ್ತೇನೆ. ಈ ನಗರದ ಎಲ್ಲ ಲೆಜಿಸ್ಲೇಟರ್ಸ್‌ನ್ನೂ ಎಕ್ಸ್ ಆಫಿಷಿಯೋ ಆಫ್ ದಿಸ್ ಬೋರ್ಡ್ ಎಂದು ಮಾಡಬೇಕು. ಆದರೆ, ಈ ಬೋರ್ಡ್‌ನಲ್ಲಿ ಸಿಟಿ ಲೆಜಿಸ್ಲೇಟರ್ಸ್‌ಗೆ ಸ್ಥಾನ ಇಲ್ಲವಾಗಿದೆ. ಅವರು ನಮ್ಮನ್ನು ಸಭೆಗೆ ಕರೆಯುವುದೇ ಇಲ್ಲ. ನಮ್ಮ ಬೆಂಗಳೂರಿನ ಪ್ರತಿಯೊಂದು ಕಾನ್‌ಸ್ಟಿಟ್ಯೂಯನ್ಸಿಯಲ್ಲೂ ಒಂದೊಂದು ಸ್ಲಮ್ ಇವೆ. ಮಾನ್ಯ ಲಕ್ಷ್ಮೀಸಾಗರ್‌ರವರ ಕಾನ್‌ಸ್ಟಿಟ್ಯೂಯನ್ಸಿಯಲ್ಲೂ ಇವೆ. ಈ ಸಮಸ್ಯೆಯನ್ನು ಹೋಗಲಾಡಿಸಲು ಸಿಟಿ ಲೆಜಿಸ್ಲೇಟರ್ಸ್‌ನ್ನು ಎಕ್ಸ್ ಆಫಿಷಿಯೋ ಮೆಂಬರ್ಸ್ ಎಂದು ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಸ್ಲಮ್ ಬೋರ್ಡ್‌ನ ಅಧಿಕಾರಿಗಳಿಗೆ ನಮ್ಮ ಬಗ್ಗೆ ಅನುಕಂಪವಿಲ್ಲ. ಆದರೆ ಮಾನ್ಯ ರಾಂದೇವ್ ರವರು ಹೇಳಿದಂತೆ ಈ ಸ್ಲಮ್ ಬೋರ್ಡ್‌ನ್ನು ಮೆಟ್ರೊಪಾಲಿಟನ್ ಕೌನ್ಸಿಲ್‌ಗೆ ಕೊಟ್ಟರೆ ಆದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈ ತಿದ್ದುಪಡಿ ೧೯೭೮ರಲ್ಲಿ ಸಭೆಯ ಮುಂದೆ ಬಂದಿದ್ದು ಇದುವರೆಗೂ ಅಂದರೆ ೧೯೮೧ನೇ ಇಸವಿಗೆ ಬಂದರೂ ಇದು ಮುಗಿದಿಲ್ಲ.

ಶ್ರೀ ಪೆಚ್. ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೆ, ಸ್ಲಮ್ ಕ್ಲಿಯರೆನ್ಸ್‌ಗೆ ಸಂಬಂಧಪಟ್ಟಂತೆ ಇನ್ನೊಂದು ಬಿಲ್ ಬರಲಿರುವುದರಿಂದ ಇದನ್ನು ಹೇಗಾದರೆ ಮುಗಿಸಿದರೆ ನನ್ನದೊಂದು ನಿರ್ಣಯ ಇದೆ ಅದನ್ನು ಪಂಡಿಸುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಪಿ. ರಾಮದೇವ್.—ಮಾನ್ಯ ಸದಸ್ಯರಾದ ಮಳ್ಳೂರು ಆನಂದರಾವ್‌ರವರು ಹೇಳಿದಂತೆ ಇದನ್ನು ಮೊದಲೇ ಮಾಡಿದ್ದರೆ ಚೆನ್ನಾಗಿತ್ತು. ಮಾನ್ಯ ಅಧ್ಯಕ್ಷರೆ, ನಾನು ಕಾರ್ಪೊರೇಷನ್‌ನಲ್ಲಿದ್ದಾಗ, ಒಂದು ಸ್ಲಮ್‌ನ್ನು ಕಾರ್ಪೊರೇಷನ್ ಮುಖಾಂತರ ತೆಗೆಸಿಹಾಕಿದರು. ಆಗ ಅವರು ತೀವ್ರಗತಿಯಲ್ಲಿ ಕೆಲಸ ಮಾಡಿಸುತ್ತಿದ್ದರು. ಆದರೆ ಈಗ ಮಾಡಿಸುತ್ತಿಲ್ಲ. ಆದ್ದರಿಂದ ಈಗಿರತಕ್ಕ ಈ ಸ್ಲಮ್ ಬೋರ್ಡ್‌ನಲ್ಲಿ ಸ್ವಲ್ಪ ಬದಲಾವಣೆಯಾಗಬೇಕು. ಈ ಬೋರ್ಡ್ ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ಮಾಡುತ್ತೇನೆಂದು ಮಾನ್ಯ ಪೌರಾಡಳಿತ ಸಚಿವರು ಭರವಸೆ ಕೊಡುವುದಾದರೆ ನಮಗೆ ಅಭ್ಯಂತರ ವಿಲ್ಲ. ಸ್ಲಮ್‌ಗಳಿಗೆ ನಾವು ಯಾವ ರೀತಿ ಪೌರಸೌಲಭ್ಯಗಳನ್ನು ಕೊಡುತ್ತಿದ್ದೇವೋ ಆದೇ ರೀತಿ ಸ್ಲಮ್‌ಗಳು ಬೆಳೆಯುವುದನ್ನು ಪ್ರಿವೆಂಟ್ ಮಾಡಬೇಕು.

ಶ್ರೀ ಮಳ್ಳೂರು ಆನಂದರಾವ್.—ನಿನ್ನೆ ತಾನೇ ನಾವು ಒಂದು ಬಿಲ್‌ನ್ನು ಪಾಸ್ ಮಾಡಿದ್ದೇವೆ.

ಶ್ರೀ ಪಿ. ರಾಮದೇವ್ (ಚುಲ್ಲೇಶ್ವರ).—ಸ್ವಾಮಿ, ಅದು ನನಗೆ ಗೊತ್ತಿದೆ. ಆದರೆ ನಾನು ಹೇಳುವುದೇನೆಂದರೆ ಇದಕ್ಕೆ ಒಂದು ಡೆಡ್‌ಲೈನ್ ಹಾಕಿ ೧೯೭೬ರ ನಂತರ ಬಂದಿರತಕ್ಕ ಸ್ಲಂಗೆ ಅಂದರೆ ಗುಡಿಸಲುಗಳನ್ನು ಹಾಕಿಕೊಂಡಿರುವವರಿಗೆ ಯಾವುದೇ ರೀತಿಯಲ್ಲೂ ಮನೆಯನ್ನಾಗಲಿ, ರಸ್ತೆಯನ್ನಾಗಲಿ, ದೀಪವನ್ನಾಗಲಿ, ನೀರನ್ನಾಗಲಿ ನಾವು ಕೊಡುವುದಿಲ್ಲವೆಂದು ಹೇಳಿದರೆ ಆಗ ಯಾವ ಸ್ಲಂಗಳೂ ಬೆಳೆಯಂವುದಿಲ್ಲ. ಮಾನ್ಯ ಮಂತ್ರಿಯವರು ಹೇಳಿದ್ದು ಸಿಂಗಪುರದ ವಿಚಾರ. They have successfully tackled this problem. The prime Minister has successfully tackled that problem. ಈಗ ಮದ್ರಾಸ್‌ನಲ್ಲಿ ಮಾಡುತ್ತಿದ್ದಾರೆ, ನಾನು ಮಾನ್ಯ ಪೌರಾಡಳಿತ ಸಚಿವರಿಗೆ ಒತ್ತಾಯ ಮಾಡುವುದೇನೆಂದರೆ. ಇನ್ನೂ ಯಾವ ಸ್ಲಂಗಳಿಗೆ ಬೇಸಿಕ್ ಅಮಿನಿಟೀಸ್ ಕೊಟ್ಟಿಲ್ಲ ಅವುಗಳಿಗೆ ಇನ್ನು ೨-೩ ತಿಂಗಳಲ್ಲಿ ಈ ಅಮಿನಿಟೀಸ್‌ನ್ನು ಒದಗಿಸಿಕೊಡಬೇಕು. ಎಲ್ಲಿ ನೀರು, ಲೈಟು, ರಸ್ತೆ, ಎಲ್ಲದಕ್ಕಿಂತ ಮುಖ್ಯವಾಗಿ ಕಕ್ಕಸು ಇಲ್ಲ ಎಂಬುದನ್ನು ನೋಡಿ ಮೊದಲು ಇವುಗಳನ್ನು ಒದಗಿಸಿಕೊಡಿ. ನಾವು ಬೆಂಗಳೂರು ನಗರದಲ್ಲಿ ಪ್ರತಿದಿನ ನೋಡುತ್ತಿದ್ದೇವೆ ಎಲ್ಲಿ ನೋಡಿದರೂ ಹೊಲಸು ವಾಸನೆ ಮೂಗಿಗೆ ಬಡಿಯುತ್ತಿರುತ್ತದೆ. ನಾವು ಈ ಜನರಿಗೆ ಕಕ್ಕಸನ್ನು ಕೊಡದಿದ್ದರೆ ಅವರು ಇನ್ನೆಲ್ಲಿಗೆ ಹೋಗಬೇಕು. ಅವರು ರೈಲ್ವೇ ಲೈನ್ ಮೇಲಲ್ಲದೆ ಇನ್ನೆಲ್ಲಿ ಕೂತುಕೊಳ್ಳುತ್ತಾರೆ. ಆದ್ದರಿಂದ ನೀವು ಮೊದಲು ಇಷ್ಟು ಅಮಿನಿಟೀಸ್‌ನ್ನು ಸ್ಲಂನಲ್ಲಿ ವಾಸಿಸುವವರಿಗೆ ಕೊಡಬೇಕು. ಮಾಸ್ಕೋ ಮುಂತಾದ ದೇಶಗಳಲ್ಲಿ ಇರತಕ್ಕ ಜನರು ಬಹಳ ಹೆಮ್ಮೆ ಪಟ್ಟುಕೊಳ್ಳುತ್ತಾರೆ. ಕಾರಣ ಅಲ್ಲಿ ನೀರು, ಕಕ್ಕಸು, ಲೈಟು, ಇಲ್ಲದೇ ಇರತಕ್ಕ ಮನೆಗಳೇ ಇಲ್ಲ. ಆದೇ ರೀತಿ ನಮ್ಮಲ್ಲೂ ಕೂಡ ಈ ಬೇಸಿಕ್ ಅಮಿನಿಟೀಸ್‌ನ್ನು ಆದಷ್ಟು ಜಾಗ್ರತೆ ಒದಗಿಸಿಕೊಡಬೇಕು. ಮಾನ್ಯ ಧರ್ಮಸಿಂಗ್‌ರವರ ಬಗ್ಗೆ ನಮಗೆ ನಂಬಿಕೆ ಇದೆ. ಅವರು ಯಾವ ಕೆಲಸವನ್ನಾದರೂ ಬಹಳ ಪ್ರಾಮಾಣಿಕತೆಯಿಂದ ಮಾಡುತ್ತಾರೆ. ಇದರಲ್ಲಿ ಸಂದೇಹವೇ ಇಲ್ಲ.

ಮಾನ್ಯ ಅಧ್ಯಕ್ಷರೆ, ಈ ಚರ್ಚೆಯಲ್ಲಿ ಸುಮಾರು ೨೦-೨೨ ಜನ ಮಾನ್ಯ ಸದಸ್ಯರುಗಳು ಭಾಗವಹಿಸಿ ತಮ್ಮ ಅನುಭವ ಹಾಗೂ ಅಮೂಲ್ಯ ಸಲಹೆಗಳನ್ನು ನೀಡಿದ್ದಾರೆ. ಅವರಿಗೂ ಮತ್ತು ಇಷ್ಟು ಮಾತನಾಡಲೂ ಅವಕಾಶ ಕೊಟ್ಟ ತಮಗೂ ನನ್ನ ವಂದನ್ನೆಗಳನ್ನೆರ್ಪಿಸಿ; ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್ (ಮಾನ್ಯ ಪೌರಾಡಳಿತ ಸಚಿವರು).—ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ರಾಮದೇವ್‌ರವರು ಈ ಸದನದಲ್ಲಿ ಮಂಡಿಸಿದ ನಿರ್ಣಯವನ್ನು ಪಾಪಸ್ಸು ತೆಗೆದುಕೊಳ್ಳಬೇಕೂ ಎನ್ನತಕ್ಕ ರೀತಿಯಲ್ಲಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇನೆ. ೧೯೭೮ರಲ್ಲಿ ಈ ನಿರ್ಣಯವನ್ನು ಅವರು ಮೂವ್ ಮಾಡಿದ್ದಾರೆ. ಆಗ ನಾನು ಸಚಿವನಾಗಿರಲಿಲ್ಲ. ಕಳೆದ ಅಧಿವೇಶನದಲ್ಲೂ ಈ ವಿಚಾರ ಚರ್ಚೆಗೆ ಬಂದಿತ್ತು. ಬೆಂಗಳೂರು ನಗರಕ್ಕೆ ಸಂಬಂಧಪಟ್ಟಂತೆ ಮಾನ್ಯ ಲಕ್ಷ್ಮೀ ಸಾಗರ್‌ರವರೂ, ಬಸವಲಿಂಗಪ್ಪನವರೂ, ಕೆ ಪ್ರಭಾಕರ್‌ರವರೂ, ಕುಮಾರಿ ಪ್ರಮೀಳಾರವರೂ ಇನ್ನೂ ಮುಂತಾದವರು ಸಾಕಷ್ಟು ರೀತಿಯಲ್ಲಿ ಮಾತನಾಡಿದ್ದಾರೆ. ಸರ್ಕಾರದ ವತಿಯಿಂದ ಏನೇನು ಕೆಲಸಗಳನ್ನು ನಾವು ಮಾಡುತ್ತಿದ್ದೇವೆಂಬುದನ್ನು ಬಹಳ ವಿವರವಾಗಿ ನಾನು ಸ್ಲಂ ಬೋರ್ಡ್‌ನ ಪರವಾಗಿ ಹೇಳಿದ್ದೇನೆ. ಆವತ್ತು ಸಮಯದ ಅಭಾವವಿದ್ದುದರಿಂದ ಈ ನಿರ್ಣಯ ಹಾಗೇ ಉಳಿಯಿತು. ಇದನ್ನು ಏತಕ್ಕೆ ಒಪ್ಪಬೇಕು, ಒಪ್ಪಲು ಇದರಲ್ಲಿರತಕ್ಕ ತತ್ವಗಳಾದರೂ ಏನು ಎಂದು ಮಾನ್ಯ ಸದಸ್ಯರುಗಳು ಅವತ್ತು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲೇ ಈ

ಕೊಳಚೆ ಪ್ರದೇಶಗಳಲ್ಲಿರತಕ್ಕ ಜನಗಳಿಗೆ ನಾವು ಏನೇನು ಸೌಕರ್ಯಗಳನ್ನು ಒದಗಿಸಿಕೊಡಬೇಕಾಗಿದೆ, ಇದಕ್ಕಾಗಿ ನಾವು ಎಷ್ಟು ಮಟ್ಟಿಗೆ ಕೆಲಸ ಕಾರ್ಯಗಳನ್ನು ಮಾಡಬೇಕಾಗಿದೆ ಎಂದು ಮಾನ್ಯ ಸದಸ್ಯರಿಗೇ ಗೊತ್ತಿದೆ. ನಾನು ಬೆಂಗಳೂರು ನಗರದ ಶಾಸಕರೊಡನೆ ಪ್ರಸ್ತಾಪ ಮಾಡುವಾಗ ಇದು ಎಷ್ಟು ಜಟಿಲ ಪ್ರಶ್ನೆ ಎಂಬುದನ್ನು ಹೇಳಿದ್ದೇನೆ. ಬೇರೆ ರಾಜ್ಯಗಳಲ್ಲಿ ಈ ಕೊಳಚೆ ಪ್ರದೇಶಗಳ ಸಮಸ್ಯೆಯನ್ನು ಯಾವರೀತಿ ಬಗೆಹರಿಸಿದ್ದಾರೆಂಬುದನ್ನು ಮೊಟ್ಟ ಮೊದಲನೆಯದಾಗಿ ನಮ್ಮ ಬೆಂಗಳೂರು ನಗರದ ಎಲ್ಲ ಶಾಸಕರನ್ನೂ ಅಲ್ಲಿಗೆ ಕರೆದುಕೊಂಡು ಹೋಗಿ ತೋರಿಸಿಕೊಂಡು ಬಂದಿದ್ದೇನೆ. ಆದರೆ, ಮಾನ್ಯ ಆನಂದರಾಯರು ಮಾತ್ರ ಏನೋ ಕೆಲಸವಿರುವುದಾಗಿ ಹೇಳಿ ಅವರು ನಮ್ಮ ಜೊತೆ ಬರಲಿಲ್ಲ. ನಮ್ಮ ಈ ಬೆಂಗಳೂರು ನಗರ ಬಹಳ ಸುಂದರವಾದ ನಗರ ಇದನ್ನು ಹಾಗೆಯೇ ಉಳಿಸಿಕೊಂಡು ಹೋಗಬೇಕು ಸ್ಲಂನಲ್ಲಿ ಇರತಕ್ಕ ಸುಮಾರು ೫–೬ ಲಕ್ಷ ಜನ ಏನಿದ್ದಾರೆ ಇವರ ಸಮಸ್ಯೆಗಳನ್ನು ಯಾವ ರೀತಿ ಬಗೆಹರಿಸಬೇಕೆಂಬುದನ್ನು ಯೋಚನೆ ಮಾಡಬೇಕಾಗಿದೆ. ಬೊಂಬಾಯಿಯಲ್ಲಿರತಕ್ಕ ಜನಸಂಖ್ಯೆಯ ಅರ್ಧ ಭಾಗ ಜನ ಸ್ಲಂನಲ್ಲೇ ವಾಸವಾಗಿದ್ದಾರೆ. ಈಗ ಸದನದಲ್ಲಿ ತಂದಿರತಕ್ಕ ತಿದ್ದುಪಡಿ ಮಸೂದೆಯಲ್ಲಿ ಸ್ಲಂ ವಿಚಾರದಲ್ಲಿ ಯಾವ ರೀತಿ ಉಗ್ರ ಕ್ರಮ ತೆಗೆದುಕೊಳ್ಳಬೇಕೆಂದಿದೆ. ಪ್ರತಿದಿನ ಸುಮಾರು ೩೦೦–೪೦೦ ಸಂಸಾರಗಳು ಹೊರಗಿನಿಂದ ಬೆಂಗಳೂರಿಗೆ ಬರುತ್ತಿವೆ. ಇದಕ್ಕೆ ನಾವು ಏನು ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಇದರಲ್ಲಿ ಹೇಳಿದ್ದೇವೆ. ಈ ಮಸೂದೆಯನ್ನು ನಾವು ಮಂಡಿಸಿದ್ದೇವೆ. ಆದರೆ ಇನ್ನೂ ಅದಕ್ಕೆ ಅನುಮೋದನೆ ದೊರೆತಿಲ್ಲ. ಕೊಳಚೆ ಪ್ರದೇಶದ ಸಮಸ್ಯೆ ಎಷ್ಟು ಭಯಂಕರ ವಾದುದು, ಇದರ ಬಗ್ಗೆ ಬೊಂಬಾಯಿ ಸರ್ಕಾರ ಯಾವ ರೀತಿ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂಬುದನ್ನು ಮಾನ್ಯ ರಾಮದೇವ್‌ರವರು ನೋಡಿಕೊಂಡು ಬಂದಿದ್ದಾರೆ.

ಮಾನ್ಯ ಅಧ್ಯಕ್ಷರೇ ತಮಗೆ ಗೊತ್ತಿರಬಹುದು, ತಾವೂ ಕೂಡ ಬಾಂಬೆ ನಗರಕ್ಕೆ ಹೋಗಿದ್ದೀರಿ. ಅಲ್ಲಿ ಸ್ಲಮ್ಸ್ ಇನ್‌ಚಾರ್ಜ್ ಒಬ್ಬ ಮಹಿಳೆಯರು ಇರುತ್ತಾರೆ. ಅವರು ಎಷ್ಟು ಬೋಲ್ಡ್ ಇದ್ದಾರೆ ಎಂದರೆ ನಮಗೇನೆ ಆಶ್ಚರ್ಯವಾಗುತ್ತದೆ. ಅವರು ಹೊಸದಾಗಿ ಸ್ಲಮ್ಸ್ ಬರುತ್ತವೆ. ಅದನ್ನು ಯಾವರೀತಿ ತಡೆಗಟ್ಟಬೇಕು ಎನ್ನುವುದರ ಬಗ್ಗೆ ಬಹಳ ಚೆನ್ನಾಗಿ ವಿವರಿಸಿದರು. ಹೊಸದಾಗಿ ಬರತಕ್ಕಂಥ ಸ್ಲಮ್ಸ್‌ಗಳನ್ನು ಕಿತ್ತು ಹಾಕಲು ಹೋದಾಗ ಅಲ್ಲಿಯ ಜನರು ಚಾಕು, ಬಾಕುಗಳನ್ನು ಹಿಡಿದುಕೊಂಡು ಬರುತ್ತಾರೆ. ಅವರನ್ನು ಯಾವ ರೀತಿ ಎದುರಿಸಬೇಕು ಎನ್ನುವುದನ್ನೆಲ್ಲ ಹೇಳಿದ್ದಾರೆ.

SRI K. BHASKAR NAIDU.—Is the Hon'ble Minister thinking of making a lady as the Chairman of the Slum Board here also and entrust this work?

SMT. S. PRAMILA.—Already a lady, Smt. Teresa Bhattacharya is the Commissioner of Bangalore Corporation. She can be made the Chairman of Slum Board also and she will be doing the work effectively.

SRI K. BHASKAR NAIDU.—I have thrown a cap Sir. I never thought it would suit her. Let her wear.

ಶ್ರೀ ಧರ್ಮಸಿಂಗ್.—ಈ ಮಾತನ್ನು ಏತಕ್ಕೆ ಹೇಳುತ್ತಾ ಇದ್ದೇನೆ ಎಂದರೆ ಆವರು ಇನ್‌ಚಾರ್ಜ್ ಇಂಜಿನೀಯರ್ ಇದ್ದರೂ, ಅವರು ಹೇಳಿದ ವಿಚಾರಗಳೆಲ್ಲ ಬಹಳ ಭಯಂಕರವಾದ ವಿಚಾರಗಳಿದ್ದವು, ಆದರೂ ಕೂಡ ನಾವು ಅದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳಿದರು. ಅದಾದನಂತರ ಬಾಂಬೆ ಕಾರ್ಪೊರೇಷನ್‌ನವರು ಹೌಸಿಂಗ್ ಅರ್ಬನ್ ಡೆವಲಪ್‌ಮೆಂಟ್ ಅಧ್ಯಕ್ಷರವರ ನೇತೃತ್ವದಲ್ಲಿ ಒಂದು ಮೀಟಿಂಗ್ ಇಟ್ಟುಕೊಂಡಿದ್ದರೂ, ಆ ಸಭೆಗೂ ಕೂಡ ನಾವು ಹೋಗಿದ್ದೇವು, ೪ ಲಕ್ಷ ಜನರು ಇರತಕ್ಕಂಥ ಬಾಂಬೆ ನಗರದಲ್ಲಿ ಕೊಳಚೆ ಪ್ರದೇಶಗಳು ಬೇಕಾದಷ್ಟು ಇರುತ್ತವೆ, ಅದರ ಪರಿಣಾಮವಾಗಿ ಉದ್ಭವವಾಗುತ್ತಿರುವ ಸಮಸ್ಯೆಗಳನ್ನು ಎದುರಿಸುತ್ತಿರುವ ಬಗ್ಗೆ ವಿವರಿಸಿದರು. ಅದೇ ಸಮಸ್ಯೆ ನಮಗೂ ಕೂಡ ಬಂದಿರುತ್ತದೆ. ಇದನ್ನು ಏತಕ್ಕೆ ಪ್ರಶ್ನೆ ಮಾಡಿದೆ ಎಂದರೆ ನಮ್ಮಲ್ಲಿ ೫ ಲಕ್ಷ ಜನಸಂಖ್ಯೆ ಇದ್ದೇವೆ ಆದರೆ ೪ಲಕ್ಷ ಜನಸಂಖ್ಯೆ ಇರುವ ಪಟ್ಟಣದಲ್ಲಿ ಇರತಕ್ಕಂಥ ಸಮಸ್ಯೆಯನ್ನು ಯಾವರೀತಿ ಎದುರಿಸುತ್ತಿದ್ದಾರೆ ಎನ್ನುವುದನ್ನು ತಿಳಿದುಕೊಂಡಿದ್ದು ಆಯಿತು. ಅವರು ಕೂಡ ಈ ಸಮಸ್ಯೆಯನ್ನು ಎದುರಿಸು

ವುದಕ್ಕೆ ಸಾಕಷ್ಟು ಹಣ ಬೇಕಾಗಿದೆ ಎಂದು ಹೇಳಿದರು. ಅನಂತರ ನಾವು ಕಲ್ಕತ್ತಕ್ಕೆ ಹೋಗಿದ್ದೆವು, ಮದ್ರಾಸ್‌ಗೆ ಹೋಗಿದ್ದೆವು. ಎಲ್ಲ ಸ್ಟೇಟ್‌ನೂ ಹೋದ ನಂತರ, ಈ ಮದ್ರಾಸ್‌ನಲ್ಲಿ ಇರತಕ್ಕಂಥ ಸ್ಲಮ್ಸ್ ಬಗ್ಗೆ ಆ ಸರ್ಕಾರದವರು ಬಹಳ ಚೆನ್ನಾಗಿ ಕೆಲಸ ಮಾಡಿರುತ್ತಾರೆ. ಮದ್ರಾಸ್‌ನಲ್ಲಿ ಮಾಡಿರ ತಕ್ಕಂಥ ಕೆಲಸಗಳು ಬಹಳ ಯಶಸ್ವಿಯಾಗಿ ಆಗಲು ಕೆಲವೊಂದು ಕಾರಣಗಳು ಇರುತ್ತದೆ. ಅದಕ್ಕೆ ಸಾಕಷ್ಟು ಹಿನ್ನೆಲೆಯೂ ಇದೆ, ಮತ್ತೆ ಅಲ್ಲಿರತಕ್ಕಂಥ ಪರಿಸ್ಥಿತಿಯೂ ಕೂಡ ಆ ರೀತಿ ಮಾಡಲಿಕ್ಕೆ ಅವಕಾಶವಾಗಿರು ತ್ತದೆ. ವರ್ಲ್ಡ್ ಬ್ಯಾಂಕ್‌ನವರ ಕಡೆಯಿಂದ ಸಾಕಷ್ಟು ಹಣ ಸಹಾಯವನ್ನೂ ಕೂಡ ಅವರು ಪಡೆದು ಕೊಂಡಿರುತ್ತಾರೆ. ಕಾಮರಾಜರ ಕಾಲದಿಂದ ಹಿಡಿದು, ಅಣ್ಣಾದೊರೈ ಮತ್ತು ಕರುಣಾನಿಧಿ ಕಾಲದ ವರೆನಿಗೂ ಈ ಕೊಳಚೆ ಪ್ರದೇಶಗಳ ಸಮಸ್ಯೆಯನ್ನು ಬಹಳ ಗಮನದಲ್ಲಿಟ್ಟುಕೊಂಡು ಪರಿಹರಿಸಿಕೊಂಡು ಬಂದಿರುತ್ತಾರೆ. ಅದನ್ನು ನಾವೂ ಕೂಡ ಒಪ್ಪಬೇಕಾಗಿದೆ. ಈವತ್ತು ನಾವು ಕೂಡ ೧೯೭೫ನೇ ಇಸವಿ ಯಿಂದ ೧೯೮೦ನೇ ಇಸವಿಯವರೆಗೆ ಅಂದರೆ ೫ ವರ್ಷಗಳ ಕಾಲದಿಂದ ಒಂದು ಸ್ಲಮ್ ಬೋರ್ಡ್‌ನ್ನು ಸ್ಥಾಪನೆ ಮಾಡಿರುತ್ತೇವೆ. ಅದಕ್ಕೆ ನಾನ್ ಅಫಿಶಿಯಲ್ ಚೇರ್‌ಮನ್ ಆಗಿದ್ದರು. ಆ ಬೋರ್ಡ್‌ನಲ್ಲಿ ಆಗಿರತಕ್ಕಂಥ ಕೆಲಸ ಕಾರ್ಯಗಳ ಬಗ್ಗೆ ಪ್ರಸ್ತಾಪ ಮಾಡಿರುತ್ತಾರೆ. ಅದಕ್ಕೆ ನಾನು ಉತ್ತರವನ್ನೂ ಸಹ ಕೊಟ್ಟಿರುತ್ತೇನೆ. ಕೇವಲ ೫ ವರ್ಷಗಳ ಅವಧಿಯಲ್ಲಿ ಮೂರು ಸ್ಕೀಮ್‌ಗಳು ಸ್ಯಾಂಕ್ಷನ್ ಆಯಿತು. ಆದಾದನಂತರ ಹುಡ್‌ಕೋ ಚೇರ್‌ಮನ್ ಮಾನ್ಯ ಮಂಕರ್ಜಿಯವರ ಜೊತೆಯಲ್ಲಿ ಮಾತನಾಡಿ ಸಂಸ್ಥೆ ಯವರು ಕರ್ನಾಟಕ ರಾಜ್ಯಕ್ಕೆ ಸಾಕಷ್ಟು ಹಣವನ್ನು ಕೊಟ್ಟಿಲ್ಲವೆಂದು ಹೇಳಿರುತ್ತೇವೆ. ಈಗಾಗಲೇ ಬೆಂಗಳೂರು ನಗರದಲ್ಲಿ ಅಧಿಕೃತವಾಗಿ ನಮ್ಮ ಪಟ್ಟಿಯ ಪ್ರಕಾರ ೨೯೦ ಸ್ಲಮ್ಸ್‌ಗಳು ಇವೆ. ಆದರೆ ಇವುಗಳ ಸಂಖ್ಯೆ ೪೦೦ಕ್ಕೂ ಮೇಲ್ಪಟ್ಟಿರುತ್ತವೆಂದು ಹೇಳುತ್ತಿರುತ್ತಾರೆ. ಈವತ್ತೂ ಕೂಡ ನಾನು ಇಲ್ಲಿಗೆ ಬರಬೇಕಾದರೆ ಮುಂಜಾನೆ ಎರಡು ಸಾವಿರ ಜನರು ಬಂದು ತಮ್ಮ ಸಮಸ್ಯೆಗಳನ್ನು ಹೇಳಿ ಕೊಂಡರು. ಮುಂಬೈನಲ್ಲಿ ನೀರಿನ ಸಮಸ್ಯೆ ಬಹಳ ಕಠಿಣವಾದ ಸಮಸ್ಯೆಯಾಗಿರುತ್ತದೆ. ಒಂದು ಕಡೆ ಬೆಳೆಯುತ್ತಿರುವ ಜನಸಂಖ್ಯೆ. ಅಂದರೆ ಜನರು ಪಟ್ಟಣಕ್ಕೆ ಬರಲು ಸಾಕಷ್ಟು ಕಾರಣಗಳು ಇರುತ್ತವೆ. ಈ ಸ್ಥಿತಿಯಲ್ಲಿ ಬಂದಂಥ ಜನರು ಗುಡಿಸಲುಗಳನ್ನು ಹಾಕತಕ್ಕಂಥ ಪರಿಸ್ಥಿತಿ ಇರುತ್ತದೆ. ಬಂದವರು ಎಲ್ಲೆಲ್ಲಿ ಸ್ಥಳಗಳು ಕಂಡುಬರುತ್ತದೋ ಅಲ್ಲಿಯೇ ಗುಡಿಸಲುಗಳನ್ನು ಹಾಕಿ ಬಿಡುತ್ತಾರೆ. ಇದಕ್ಕೆ ಪ್ರೋತ್ಸಾಹ ಕೊಡತಕ್ಕಂಥ ವಾಧ್ಯಮರ್ತಿ ಜನರು ಇರುತ್ತಾರೆ ಇವರು ನಾನಾ ರೀತಿಯಲ್ಲಿ ಆ ಜನರನ್ನು ವಂಚಿಸುತ್ತಿರುತ್ತಾರೆ. ವಂಂತ್ರಿಗಳ ಕಡೆಯಿಂದಲೇ ಸಹಾಯವನ್ನು ಮಾಡಿಸಿಕೊಡುತ್ತೇವೆಂದು ಹೇಳ ತಕ್ಕಂಥ ಜನರು ಇದ್ದಾರೆ ನಾನೂ ಕೂಡ ನಗರ ಸಭೆಯ ಅಧ್ಯಕ್ಷನಾಗಿ ಕೆಲಸ ಮಾಡಿರುವ ಕಾರಣ ಇದರ ಹಿನ್ನೆಲೆಯೆಲ್ಲ ತಿಳಿದುಕೊಂಡಿರುತ್ತೇನೆ. ಮತ್ತು ಯಾವ ರೀತಿ ಸ್ಲಮ್ಸ್ ಬರುತ್ತದೆ ಎನ್ನುವುದು ಕೂಡ ನನಗೆ ತಿಳಿದಿರುತ್ತದೆ. ಈವತ್ತು ಬೆಂಗಳೂರು ನಗರ ಒಂದು ದೊಡ್ಡ ಪಟ್ಟಣವಾಗಿರುತ್ತದೆ. ಇಲ್ಲಿ ಸಾಕಷ್ಟು ಕಾರ್ಪೊರೇಷನ್‌ಗಳು ಇರುತ್ತವೆ. ಅಲ್ಲದೆ ಇದು ಒಂದು ವ್ಯಾಪಾರ ಕೇಂದ್ರವು ಆಗಿರುವುದರಿಂದ ಕೂಲಿಗಾಗಿ ಜನರು ಬರುತ್ತಾರೆ. ಬಂದಂಥ ಜನರು ನಗರವು ಬಹಳ ಆಕರ್ಷಣೀಯವಾಗಿರುವುದರಿಂದ ಇಲ್ಲಿಯೇ ನೆಲೆಸಿಬಿಡುತ್ತಾರೆ, ನಮ್ಮ ಬೆಂಗಳೂರು ನಗರದಲ್ಲಿ ತಮಿಳಿಂನಾಡು ಜನರೆ ಬಹಳ ಜಾಸ್ತಿ ಇರು ತ್ತಾರೆ. ತಮಿಳುನಾಡು ಜನರು ಇರಬಾರದು ಎಂದು ಹೇಳುತ್ತಿಲ್ಲ. ಈವತ್ತು ಬೇರೆ ಕಡೆ ನೋಡಿದರೆ ಬಾಂಬೆಯಲ್ಲಿ ಕರ್ನಾಟಕ ಜನರು ಇದ್ದಾರೆ. ಆದರೆ ಮದ್ರಾಸ್‌ನಲ್ಲಿ ಕರ್ನಾಟಕ ಜನರು ಅಷ್ಟೊಂದು ಇಲ್ಲ ಎಂದರೆ ಕರ್ನಾಟಕದಲ್ಲಿ ತಮಿಳುನಾಡಿನಿಂದ ಬಂದಿರತಕ್ಕಂಥ ಜನರು ಏನು ಇದ್ದಾರೆ ಅವರನ್ನು ಹೀಗೆಯೇ ಬರಲು ಮುಂದುವರಿಸಿಕೊಂಡು ಹೋಗುತ್ತಿದ್ದರೆ ಬೆಂಗಳೂರಿನಲ್ಲಿರತಕ್ಕಂಥ ಜನರಿಗೆ ೨೬–೨೮ ಲಕ್ಷ ಅಂದಾಜು ಏನು ಇದೆ ಅವರಿಗೆ ಸಮರ್ಪಕವಾಗಿ ನೀರನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ನ್ಯಾಷನಲ್ ವಾಟರ್ ಸಪ್ಲೈ ಸ್ಕೀಮ್ ಪ್ರಕಾರ ೪೫ ಗ್ಯಾಲನ್ ನೀರನ್ನು ಕೊಡಬೇಕಾಗಿರತಕ್ಕಂಥದ್ದು ೧೫–೧೬ ಗ್ಯಾಲನ್ ನೀರನ್ನು ಕೊಡತಕ್ಕಂಥ ಪರಿಸ್ಥಿತಿಯಲ್ಲಿ ಇರುತ್ತೇವೆ. ಇದು ಕೂಡ ಎಲ್ಲ ಮಂದಿಗೂ ಸಿಕ್ಕುತ್ತಿಲ್ಲ. ಕಾವೇರಿ ಎರಡನೆಯ ಹಂತ ಮುಗಿದರೂ ಕೂಡ ಮೂವತ್ತು ಗ್ಯಾಲನ್ ನೀರನ್ನು ಕೊಡಲು ಸಾಧ್ಯವಾಗುವುದಿಲ್ಲ. ೨೨–೨೩ ಗ್ಯಾಲನ್ ನೀರನ್ನು ಕೊಡುತ್ತೇವೆಂದರೂ ಕೂಡ ೩೦ ಲಕ್ಷ ಪಾಪ್ಯು ಲೇಷನ್‌ಗೆ ೧೯೫೫ರಷ್ಟು ಹೊತ್ತಿಗೆ ನೀರನ್ನು ಒದಗಿಸಿ ಕೊಡಬೇಕಾಗುತ್ತದೆ. ಈಗಾಗಲೇ ಒಂದುನೂರು ಕಿಲೋಮೀಟರ್ ದೂರದಿಂದ ನೀರನ್ನು ಬೆಂಗಳೂರು ನಗರಕ್ಕೆ ತರುತ್ತಿದ್ದೇವೆ. ಇಂಥದ್ದು ಜಗತ್ತಿನಲ್ಲಿ ಆರನೆಯ ಪಟ್ಟಣವಾಗಿದೆ. ಜನರು ಬೆಳೆದಂತೆಲ್ಲ ನೀರು ಕೊಡಬೇಕೆಂದರೆ ಬಹಳ ಕಷ್ಟಕರವಾದ ಪ್ರಸಂಗ ವಾಗುತ್ತದೆ. ಜನ ಸಂಖ್ಯೆಗೆ ಅನುಗುಣವಾಗಿ ನೀರನ್ನು ಕೊಡತಕ್ಕಂಥ ಪರಿಸ್ಥಿತಿಯಲ್ಲಿಲ್ಲ. ನಾನು ಮೊದಲೇ ಈ ಬಿಲ್ಲನ್ನು ಪ್ರಸ್ತಾಪ ಮಾಡುವಾಗ ಹೇಳಿದ್ದೆ ಸಿಟಿಯಲ್ಲಿ ಇರತಕ್ಕಂಥ ಸ್ಲಮ್ಸ್‌ನವರಿಗೆ ಅಕ್ಕ

ಪಕ್ಕದಲ್ಲಿಯೇ ಜಾಗವನ್ನು ಮಾಡಿಕೊಟ್ಟರೂ ಕೂಡ ಅವರ ಜೀವನಕ್ಕೆ ಸಕಲ ಸೌಕರ್ಯಗಳನ್ನು ಮಾಡ ಬೇಕಾಗಿರುತ್ತದೆ. ಆದ ಕಾರಣ ಇದನ್ನೆಲ್ಲವನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರು ನಗರಕ್ಕೆ ಹಂಡ್ರೋ ಸ್ಕೀಮ್‌ನವರ ನೆರವನ್ನು ಪಡೆದುಕೊಂಡು ಎಷ್ಟರ ಮಟ್ಟಿಗೆ ಮುಂದುವರಿಯಲು ಸಾಧ್ಯವೋ ಅಷ್ಟು ಮುಂದುವರಿಯಲು ಪ್ರಯತ್ನ ಪಡಬೇಕಾಗಿರುತ್ತದೆ,

೧-೦೦ ಪಿ.ಎಂ.

ಸ್ವಾಮಿ, ಈ ಮೊದಲು ಬೆಂಗಳೂರು ನಗರದಲ್ಲಿ ಕಾರ್ಪೋರೇಷನ್ ಸ್ಲಂಸ್ ಬೇರೆ, ಬಿ.ಡಿ.ಎ. ಸ್ಲಂಸ್ ಬೇರೆ, ಕೊಳಚೆ ಮಂಡಲಿ ಸ್ಲಂಸ್ ಬೇರೆ ಇತ್ತು. ಈಗ ಅವೆಲ್ಲವನ್ನೂ ತೆಗೆದು ಅದಕ್ಕೆಲ್ಲಾ ಒಂದೇ ಒಂದು ಏಜೆನ್ಸಿಗೆ ಕೊಟ್ಟಿದ್ದೇವೆ. ಮೊದಲು ಈ ರೀತಿಯಾಗಿ ಬೇರೆ ಬೇರೆಯವರ ಆಡಳಿತಕ್ಕೆ ಸೇರಿದ ಸ್ಲಂಸ್‌ನಿಂದ ಯಾವರೀತಿಯಾಗಿಯೂ ಅವರಿಗೆ ಕೆಲಸ ಆಗುತ್ತಿರಲಿಲ್ಲ. ಏನಾದರೂ ಯಾರಾದರೂ ಈ ಬಗ್ಗೆ ಫೋನ್ ಮಾಡಿ ಕೇಳಿದರೆ ಈ ಸ್ಲಂಸ್ ನನಗೆ ಸೇರಿದ್ದಲ್ಲ, ಅವರಿಗೆ ಸೇರಿದ್ದು ಅಂತ ಹೇಳುತ್ತಿದ್ದರು. ಈಗ ಅವೆಲ್ಲವನ್ನೂ ಸೇರಿಸಿ ಒಂದೇ ಒಂದು ಏಜೆನ್ಸಿ ಮಾಡಿದ್ದರಿಂದ ಈ ಬಗ್ಗೆ ಏನು ಕೆಲಸ ಕಾರ್ಯಗಳು ಆಗಬೇಕಾದರೂ ಸಹ ಈ ಸ್ಲಂ ಬೋರ್ಡ್‌ಗೆ ಬರುತ್ತದೆ. ಇವರು ಅದರ ಬಗ್ಗೆ ಏನೇನು ಕೆಲಸಕಾರ್ಯಗಳು ಆಗಬೇಕು ಅನ್ನುವುದನ್ನು ವಿಚಾರ ಮಾಡುತ್ತಾರೆ. ಈಗ ಮೂರು ತರಹ ಸ್ಲಂಸ್‌ಗಳೂ ಸಹ ಇದು ಒಂದೇ ಬೋರ್ಡ್‌ಗೆ ಬರುತ್ತದೇ ವಿನಾ ಇನ್ನೆಲ್ಲಿಗೂ ಬರುವುದಿಲ್ಲ. ೧೯೮೦ ರಲ್ಲಿ ಈ ಬಗ್ಗೆ ಒಂದು ರೆಸಲ್ಯೂಷನ್ ಮಂಡಿಸಿದಾಗಲೇ ಈ ವಿಚಾರದಲ್ಲಿ ಹೇಳಿದ್ದೇನೆ, ಮೊನ್ನೆಯು ಸಹ ಹೇಳಿದ್ದೆ. ನಿಮಗೆ ಮತ್ತೊಂದು ವಿಷಯ ಹೇಳಬೇಕಾದರೆ ೧೯೭೫ ರಿಂದ ೧೯೮೦ ರವರೆಗೆ ಬೆಂಗಳೂರಿನಲ್ಲಿ ಈ ಬಗ್ಗೆ ಮೂರೇ ಮೂರು ಸ್ಕೀಂಗಳಿಗೆ ಸ್ಯಾಂಕ್ಷನ್ ಆಗಿತ್ತು. ಈವೊತ್ತಿನ ದಿವಸ ನಾವು ಕಮಲಾನಗರ, ವೆಂಕಟರಮಣ ನಗರ, ಗಂಗೇನಹಳ್ಳಿ, ತಾವರೆಕೆರೆ ಮತ್ತು ಆಡುಗೋಡಿ ಈ ಪ್ರದೇಶದಲ್ಲಿ ೨೬.೨.೮೦ ರೂಪಾಯಿ ವೆಚ್ಚದಲ್ಲಿ ಒಟ್ಟು ೩೪೫೬ ಟೆನಮೆಂಟ್ಸ್ ಕಟ್ಟಲಿಕ್ಕೆ ತಯಾರಾಗಿದ್ದೇವೆ. ಇದಲ್ಲದೆ ಗುಡ್ಡೆ ಆಂಜನೇಯ ಸ್ವಾಮಿ ಟೆಂಪಲ್ ಮತ್ತು ಲಕ್ಷ್ಮಿ ಟಾಕೀಸ್ ಹಿಂಭಾಗದಲ್ಲಿ ಮತ್ತು ಕೋರಮಂಗಲದಲ್ಲಿ ೧ ಕೋಟಿ ೫೧ ಲಕ್ಷ ರೂಪಾಯಿ ವೆಚ್ಚದಲ್ಲಿ ಒಟ್ಟು ಎರಡು ಸಾವಿರಕ್ಕೂ ಮೇಲ್ಪಟ್ಟು ಟೆನಮೆಂಟ್ಸ್‌ಗಳನ್ನು ಕಟ್ಟಲಿಕ್ಕೆ ತಯಾರಾಗಿದ್ದೇವೆ. ಒಟ್ಟಿನಲ್ಲಿ ಹೇಳಬೇಕಾದರೆ ಒಟ್ಟು ೭ ಸಾವಿರ ಟೆನಮೆಂಟ್ಸ್‌ಗಳನ್ನು ೬ ಕೋಟಿ ರೂಪಾಯಿ ವೆಚ್ಚದಲ್ಲಿ ಕಟ್ಟಲಿಕ್ಕೆ ಈ ಸ್ಲಂ ಕ್ಲಿಯರೆನ್ಸ್ ಬೋರ್ಡ್ ಒಂದು ಯೋಜನೆ ಹಾಕಿಕೊಂಡಿದೆ. ಇದಲ್ಲದೆ ಬೆಂಗಳೂರು ನಗರದಲ್ಲಿ ಈಗಾಗಲೇ ಇರತಕ್ಕಂಥಾ ಸ್ಲಂಸ್‌ಗಳಲ್ಲಿ ೧೦೦ಕ್ಕೂ ಮೇಲ್ಪಟ್ಟು ಸ್ಲಂಸ್‌ಗಳನ್ನು ಇಂಪ್ರೂ ಮಾಡುವುದಕ್ಕೆ ಸಾಕಷ್ಟು ದುಡ್ಡನ್ನು ಒದಗಿಸಿದ್ದೇವೆ, ಅವರೂ ಸಹ ಈ ಬಗ್ಗೆ ಕೆಲಸ ಮಾಡುತ್ತಿದ್ದಾರೆ. ಈಗ ಪ್ರಸ್ತುತ ಸ್ಲಂಸ್‌ಗಳು ಏನು ಇವೆ ಅದರ ಕೆಲಸಕಾರ್ಯಗಳ ಬಗ್ಗೆ ಅದನ್ನು ಇಪ್ರೂ ಮಾಡುವ ಬಗ್ಗೆ, ಅದಕ್ಕೆ ದೀಪ, ವಾಟರ್ ವಗೈರೆ ಬಗ್ಗೆ ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡುತ್ತಿದ್ದೇವೆ. ನಾವು ಈ ಬಗ್ಗೆ ಹೆಚ್ಚು ಕೆಲಸಕಾರ್ಯಗಳನ್ನು ಮಾಡುತ್ತಿದ್ದರೂ ಕೂಡ ಮತ್ತು ಇನ್ನೂ ಮಾಡತಕ್ಕಂಥಾ ರೀತಿಯಲ್ಲಿದ್ದರೂ ಕೂಡ, ಆ ಬಗ್ಗೆ ಇನ್ನೂ ಕೆಲಸಕಾರ್ಯಗಳಾಗಬೇಕು ಎಂದು ಮತ್ತೊಮ್ಮೆ ನಮ್ಮ ಗಮನಕ್ಕೆ ತಂದಿದ್ದಾರೆ. ಆದಕಾರಣ ಈ ನಿರ್ಣಯದ ಮೇಲೆ ಮಾನ್ಯ ಸದಸ್ಯರು ಹೆಚ್ಚು ಪ್ರಶ್ನೆಗಳನ್ನು ಕೇಳದೆ ಅವರು ತಂದಿರತಕ್ಕಂಥಾ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕು ಎಂದು ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ರಾಮದೇವ್.—ಮಾನ್ಯ ಮಂತ್ರಿಗಳು ಇದಕ್ಕೆ ಉತ್ತರ ಕೊಡುತ್ತಾ ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿದ್ದಾರೆ. ನಾನು ಈಗಾಗಲೇ ಹೇಳಿದ್ದೇನೆ. ೧೯೭೮ರ ಪ್ರಾರಂಭದಿಂದ ೧೯೮೦ರ ಆಗಸ್ಟ್‌ವರೆಗೂ ಕೂಡ ಅದಷ್ಟು ಸೌಲಭ್ಯಗಳನ್ನು ಕೆಲವರಿಗೆ ಕಲ್ಪಿಸಿಕೊಟ್ಟಿದ್ದಾರೆ. ಇನ್ನು ಕೆಲವರಿಗೆ ಪ್ರಾರಂಭ ಮಾಡಿದ್ದಾರೆ. ಆದುದರಿಂದ ಅವರಲ್ಲಿ ಮುಂದೂ ಕೂಡ ಹಾಗೆ ಮಾಡುತ್ತಾರೆ ಎನ್ನುವ ಭರವಸೆ ನನಗೆ ಇದೆ. ಈಗ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಉಳಿದ ಸ್ಲಂಸ್‌ಗಳಿಗೂ ಕೂಡ ಸರಿಯಾದಂಥಾ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಆ ಸ್ಲಂಸ್‌ಗಳಿಗೂ ಕೂಡ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತಾರೆ ಎನ್ನುವ ಭರವಸೆ ನನಗೆ ಇದೆ. ಮತ್ತೊಂದು ಸಾರಿ ಮಾನ್ಯ ಮಂತ್ರಿಗಳು ಭರವಸೆ ಕೊಡುವುದಾದರೆ ಈ ನಿರ್ಣಯವನ್ನು ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ. ನಮಗೆ ಮುಖ್ಯವಾಗಿ ಬೇಕಾಗಿರುವುದೇನೆಂದರೆ ಪೌರ ಸೌಲಭ್ಯ ಅವರಿಗೆ ಕೊಡಬೇಕೆನ್ನುವುದು. ನೀವು ಈಗಾಗಲೇ ಸಾಕಷ್ಟು ಕೊಟ್ಟಿದ್ದೀರಿ, ಕೊಟ್ಟಿಲ್ಲ ಎಂದು ನಾನು ಹೇಳುವುದಿಲ್ಲ. ನೀವು

ಈ ಬಗ್ಗೆ ಪ್ರಾಮಾಣೀಕತೆಯಿಂದ ದುಡಿದಿದ್ದೀರಿ, ಮತ್ತೊಂದು ಸಾರಿ ಈ ಬಗ್ಗೆ ತಾವು ಭರವಸೆ ಕೊಡುವುದಾದರೆ ನಾನು ತಂದಿರತಕ್ಕಂಥಾ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬಹುದು.

ಶ್ರೀ ಧರ್ಮಸಿಂಗ್.—ಮಾನ್ಯ ಉಪಾಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಭರವಸೆ ಕೊಡುವುದೇನೆಂದರೆ ಅಲ್ಲಿಗೆ ಬೇಕಾದಂಥಾ ಎಲ್ಲಾ ಕೆಲಸಕಾರ್ಯಗಳನ್ನೂ ಕೂಡ ಯಶಸ್ವಿಯಾಗಿ ಮಾಡಿಕೊಂಡು ಹೋಗುತ್ತೇನೆ ಎನ್ನುವ ಭರವಸೆ ಕೊಡುತ್ತೇನೆ.

MR. DEPUTY SPEAKER.—Is it the pleasure of the House that leave be granted to withdraw the motion ?

HON. MEMBERS.—Yes.

The Resolution was, by leave of the House, withdrawn.

MR. DEPUTY SPEAKER.—I now call hon. Member Sri H. L. Thimme Gowda to move the next resolution.

SRI B. BHASKAR SHETTY.—Sir No quorum.

SRI A. LAKSHMI SAGAR.—This will not be taken up to-day. The hon. Member will just move the resolution. We can discuss this on some other day.

SRI Y. RAMAKRISHNA.—It cannot be taken up to-day as time is over. It is already five minutes past one of the clock.

ಶ್ರೀ ಎ. ಲಕ್ಷ್ಮೀಸಾಗರ್.—ತಮಗೇ ಗೊತ್ತಿದೆ. ಎಷ್ಟೋ ಸಾರಿ ಒಂದು ಗಂಟೆ, ಎರಡು ಗಂಟೆಯವರೆಗೂ ಕೂತಿದ್ದೇವೆ. ಸುಮ್ಮನೆ ತೊಂದರೆ ಮಾಡಬೇಡಿ. ಹೇಗಾದರೂ ಕೂಡ ಈವೊತ್ತು ಇದರ ಡಿಸ್ಕಷನ್ ಇಲ್ಲ, ಬೇರೆ ದಿವಸವೇ ಡಿಸ್ಕಷನ್ ಮಾಡೋಣ. ಒಂದು ವೇಳೆ ನಾವು ಈವೊತ್ತು ಡಿಸ್ಕಸ್ ಮಾಡಿದರೂ ಸಹ ನಮಗೂ ಗೊತ್ತಿದೆ. You can vote it out bacause you are in majority.

ಶ್ರೀ ಎಚ್. ಎಲ್. ತಿಮ್ಮೇಗೌಡ.—ನನಗೆ ಈ ರೆಸಲ್ಯೂಷನ್ ಅನ್ನು ಈ ದಿವಸ ಈ ಸಭೆಯಲ್ಲಿ ಮಂಡಿಸುವುದಕ್ಕೆ ಅವಕಾಶ ಕೊಟ್ಟಿದಕ್ಕಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. I move :

> "That this House resolves that the Government do take steps to bring into force the law relating to LOK AYUKTA in Karnataka".

ಈ ಬಗ್ಗೆ ಚರ್ಚೆಯನ್ನು ಇನ್ನೊಂದು ದಿವಸ ಇಟ್ಟುಕೊಳ್ಳಬಹುದೆಂದು ಹೇಳಿ ಮತ್ತೊಮ್ಮೆ ವಂದನೆಯನ್ನು ಅರ್ಪಿಸುತ್ತೇನೆ.

The question was proposed.

MR. DEPUTY SPEAKER.—Now, the House stands adjourned to meet again on Monday the 16th March, 1981 at 1-00 P.M.

The House adjourned at Ten minutes past One of the Clock to meet again at One of the Clock on Monday 16th March 1981.